| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 555/2024**

ಪಿಡ್ಲ್ಯೂಃ 2 ಸಿಡ್ಲ್ಯೂಃ 2

ಸಾಕ್ಷಿದಾರನ ಹೆಸರು : ಮಂಜುನಾಥ್

ತಂದೆಯ ಹೆಸರು : ಪುಟ್ಟ

ಪ್ರಾಯ : 38 ವರ್ಷ

ಉದ್ಯೋಗ : ಕೂಲಿ

ವಾಸ : ಶೃಂಗೇರಿ

ದಿನಾಂಕ 15.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಆರೋಪಿಯನ್ನು ನಾನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

ಚಾಸಾ-1 ಪರಿಚಯ ಇರುವುದಿಲ್ಲ. ಚಾಸಾ-3 ರವರ ಪರಿಚಯ ಇದೆ. ನನ್ನ ಅಕ್ಕನ ಮಗ. ಚಾಸಾ-4 ರವರ ಪರಿಚಯ ಇದೆ ಅವರು ನನ್ನ ಅಣ್ಣನ ಮಗ. ಚಾಸಾ-5 ರಿಂದ 8 ರವರ ಪರಿಚಯ ಇಲ್ಲ.

ದಿಃ10.12.2023 ರಂದು ನಾನು ನನ್ನ ಕುಟುಂಬದೊಂದಿಗೆ ಶೃಂಗೇರಿಯಿಂದ ನಂದಳಿಕೆ ದೇವಸ್ಥಾನಕ್ಕೆ ಪೂಜೆಗೆ ಬಂದಿರುತ್ತೇನೆ. ಪೂಜೆ ಮುಗಿಸಿ ಮಧ್ಯಾಹ್ನ 1.30 ಗಂಟೆಗೆ ವಾಪಸ್ಸು ಶೃಂಗೇರಿ ನನ್ನ ಮನೆಗೆ ಹೊರಟಿದ್ದು ರಸ್ತೆಯಲ್ಲಿ ಏನಾಯಿತು ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಜೀಪನ್ನು ಯಾರು ಚಲಾಯಿಸುತ್ತಿದ್ದರು ಎಂದು ಗೊತ್ತಿರುವುದಿಲ್ಲ. ಎಲ್ಲಿ, ಏನಾಯಿತು ಮತ್ತು ಯಾವ ವಾಹನಕ್ಕೆ ಢಿಕ್ಕಿ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಯಾರಿಗೆ ಎಲ್ಲಿ ಎಲ್ಲಿ ಗಾಯವಾಗಿದೆ ಎಂದು ಗೊತ್ತಿರುವುದಿಲ್ಲ. ಯಾರು ಮೃತಪಟ್ಟಿರುತ್ತಾರೆ

ಎಂದು ಆ ಸಮಯದಲ್ಲಿ ನನಗೆ ಗೊತ್ತಾಗಿರುವುದಿಲ್ಲ. ಅಪಘಾತಕ್ಕೆ ಏನು ಕಾರಣ ಎಂದು ನನಗೆ ಗೊತ್ತಿರುವುದಿಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಪ್ರಯಾಣಿಸುತ್ತಿದ್ದ ಜೀಪು ಮತ್ತು ಬಸ್ಸಿನ ಭಾವಚಿತ್ರಗಳನ್ನು ನೋಡಿದ್ದು ಜೀಪನ್ನು ಗುರುತಿಸಿದ್ದು, ಬಸ್ಸನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಸದ್ರಿ ಜೀಪಿನ 4 ಭಾವಚಿತ್ರಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ದಿಃ10.12.2023 ರಂದು ನಾನು ನಂದಳಿಕೆಯಿಂದ ಊಟ ಮುಗಿಸಿ ಅದೇ ದಿನ ಮಧ್ಯಾಹ್ನ 3.15 ಗಂಟೆಗೆ ವಾಪಸ್ಸು ಊರಿಗೆ ಹೊರಟೆವು ಆ ಸಮಯದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಜೀಪನ್ನು ಚಲಾಯಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು, ಚಾಸಾ-3 ಮತ್ತು 4 ವಾಹನದ ಹಿಂದಿನ ಸೀಟಿನಲ್ಲಿ ಕುಳಿತ್ತಿದ್ದೇವು ಎಂದರೆ ಸರಿ. ಮೃತ ಶಿವಪ್ಪ ರವರು ಚಾಲಕನ ಎಡಬದಿಯಲ್ಲಿ ಕುಳಿತ್ತಿದ್ದರು ಎಂದರೆ ಗೊತ್ತಿಲ್ಲ. ನಾವು ಪಡುಬಿದ್ರೆ-ಕಾರ್ಕಳ ರಸ್ತೆಯಲ್ಲಿ ಕೆದಿಂಜೆ ಗ್ರಾಮದ ಬಿ ಎಸ್ ಕೆ ಕ್ಯಾಶ್ಯೂ ಫ್ಯಾಕ್ಟರಿ ಮುಂದೆ ಹೋಗುವಾಗ ಜೀಪನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ಎದುರಿನಿಂದ ಬರುತ್ತಿದ್ದ ಬಸ್ಸನ್ನು ನೋಡದೆ ಆರೋಪಿಯು ಎದುರಿನಿಂದ ಹೋಗುತ್ತಿದ್ದ ಒಂದು ವಾಹನವನ್ನು ಓವರ್ ಟೇಕ್ ಮಾಡಲು ರಸ್ತೆಯ ತೀರಾ ಬಲಬದಿಗೆ ಚಲಾಯಿಸಿ ಎದುರಿನಿಂದ ಬರುತ್ತಿದ್ದ ಬಸ್ಸಿಗೆ ಢಿಕ್ಕಿ ಹೊಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ಅದರ ಪರಿಣಾಮ 2 ವಾಹನಗಳು ರಸ್ತೆಯ ಬಲ ಬದಿಯ ತಗ್ಗು ಪ್ರದೇಶಕ್ಕೆ ಹೋಗಿ ನಿಂತಿತ್ತು ಎಂದರೆ ನಾನು ನೋಡಿರುವುದಿಲ್ಲ. ಪರಿಣಾಮ

ನಮ್ಮ ವಾಹನ ಸಂಪೂರ್ಣ ಜಖಂಗೊಂಡಿತ್ತು ಹಾಗೂ ಬಸ್ಸಿನ ಮುಂಭಾಗ ಜಖಂಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಅದರ ಪರಿಣಾಮ ನನಗೆ ಎಡಕಾಲಿಗೆ ತೀವ್ರ ತರಹದ ಗಾಯ ಮೂಗು, ಎಡ ಕೈಗೆ ಗುದ್ದಿದ ಗಾಯವಾಗಿತ್ತು ಎಂದರೆ ಸರಿ. ಅಪಘಾತವಾದ ನಂತರ ಅಲ್ಲಿ ನೆರೆದಿದ್ದ ಜನರು ನಮ್ಮ ಬಳಿ ಬಂದು ನಮ್ಮನ್ನು ವಾಹನದಿಂದ ಹೊರಗೆ ತೆಗೆದು ಉಪಚರಿಸಿದರು ಎಂದರೆ ಗೊತ್ತಿಲ್ಲ. ಅಪಘಾತದಿಂದ ಚಾಸಾ-3 ರವರಿಗೆ ತಲೆ, ಎದೆಯ ಎಡಭಾಗಕ್ಕೆ ಗುದ್ದಿದ ಗಾಯವಾಗಿತ್ತು, ಆರೋಪಿಗೆ ಎಡಕೈಗೆ ರಕ್ತಗಾಯವಾಗಿತ್ತು ಮತ್ತು ಚಾಸಾ-4 ರ ವರ ಎಡಕೈ ಹಾಗೂ ಎಡಕಾಲಿಗೆ ಗಾಯವಾಗಿತ್ತು ಎಂದರೆ ಆ ಸಮಯದಲ್ಲಿ ನನಗೆ ಗೊತ್ತಾಗಲಿಲ್ಲ ಸ್ವಲ್ಪ ದಿನ ಕಳೆದ ನಂತರ ತಿಳಿದುಬಂದಿರುತ್ತದೆ. ಮೃತ ಶಿವಪ್ಪ ರವರ ತಲೆಗೆ ಮತ್ತು ಕಾಲಿಗೆ ತೀವ್ರ ತರಹದ ಗಾಯವಾಗಿತ್ತು ಎಂದರೆ ಗೊತ್ತಿಲ್ಲ. ಅಲ್ಲಿ ಸೇರಿದವರು ನಮ್ಮನ್ನು ಚಿಕಿತ್ಸೆಗಾಗಿ ಒಂದು ವಾಹನದಲ್ಲಿ ಕಾರ್ಕಳದ ಟಿ ಎಂ ಎ ಪೈ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ಧರು ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಪರೀಕ್ಷಿಸಿದ ವೈದ್ಯರು ನನ್ನನ್ನು ಮತ್ತು ಚಾಸಾ-3 ರವರನ್ನು ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ ಕೆಎಂ ಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಅಪಘಾತದಲ್ಲಿ ಗಾಯಗೊಂಡ ಶಿವಪ್ಪ ರವರು ಟಿ ಎಂ ಎ ಆಸ್ಪತ್ರೆಗೆ ಕರೆದುಕೊಂಡು ಬಂದಾಗ ಮೃತಪಟ್ಟಿರುವುದಾಗಿ ಹಾಗೂ ಬಸ್ಸಿನದಲ್ಲಿದ್ದ 3 ಹೆಂಗಸು ಗಾಯಗೊಂಡಿರುವುದಾಗಿ ಮತ್ತೆ ತಿಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಅಪಘಾತವು ಮಧ್ಯಾಹ್ನ 3.30 ಗಂಟೆ ಆಗಿದ್ದು ಮತ್ತು ನಮ್ಮ ವಾಹನ ಕೆಎ-51-ಎಡಿ 0299 ಆಗಿರುತ್ತದೆ ಎಂದರೆ ನಾನು ನೋಡಿರುವುದಿಲ್ಲ. ಈ ಅಪಘಾತಕ್ಕೆ ಜೀಪು ಚಾಲಕನಾದ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಲಾನೆಯೇ ಕಾರಣವಾಗಿರುತ್ತದೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಸಂಬಂಧಿಸಿದಂತೆ

ದಿಃ12.12.2023 ರಂದು ಮದ್ಯಾಹ್ನ 12.15 ರಿಂದ 1.00 ಗಂಟೆಯವರೆಗೆ ಮಣಿಪಾಲ ಕೆ ಎಂ ಸಿ ಆಸ್ಪತ್ರೆಯಲ್ಲಿ ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎಸ್ ಕೆ ವಕೀಲರಿಂದಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the CW 4 to 17. As the eye witness Pw to 3 have completly turned hostile to the case of prosecution. No purpose will be served by

issuance of summons to CW 4 to 17. Hence by rejecting the prayer of learned APP evidence of CW 4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 28-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of

prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 17.08.2021

Prl. Civil Judge & JMFC.
Karkala